# 13. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನೂಲಿಗ್ಗೇರಿ, ಹೊಸನಗರ ತಾ

"ಸಾವಿರ ಮೈಲಿಯ ಪಯಣ ಆರಂಭವಾಗುವುದು ನಾವಿಡುವ ಮೊದಲ ಹೆಜ್ಜೆಯಿಂದ" ಎಂಬ ಮಾತಿನಂತೆ ಯಶಸ್ಸಿನ ಕಥೆಗಳ ಆರಂಭವಾಗುವುದೇ ಸಣ್ಣ ಸಣ್ಣ ಪ್ರಯತ್ನಗಳ ಸಾಕಾರದಿಂದ.

ಮಲೆನಾಡಿನ ತಪ್ಪಲಿನಲ್ಲಿರುವ ಒಂದು ಪುಟ್ಟ ಶಾಲೆಯೇ ನಮ್ಮ ಸ. ಹಿ. ಪ್ರಾ ಶಾಲೆ ನೂಲಿಗ್ಗೇರಿ . 2013 ನೇ ಇಸವಿಯಲ್ಲಿ 'ನ ಭೂತೋ ನ ಭವಿಷ್ಯತ್' ಎಂಬಂತೆ ಅದ್ದೂರಿಯಾಗಿ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿರುವ ಶಾಲೆಯೇ ನಮ್ಮೀ ಶಾಲೆ.

ಜೊತೆಗೆ ನಗರ ಭಾಗದ ಒಂದು ಸಾಂಸ್ಕೃತಿಕ ಕೇಂದ್ರ ಎಂದರು ತಪ್ಪಾಗಲಾರದು. ಪ್ರತೀ ವರ್ಷ ಅದ್ದೂರಿಯಾಗಿ ಶಾಲಾ ವಾರ್ಷಿಕೋತ್ಸವ, ವೈಶಿಷ್ಟ್ಯಪೂರ್ಣ ಸ್ವಾತಂತ್ರ್ಯ ದಿನಾಚರಣೆ, ಶ್ರೀ ವಿದ್ಯಾಗಣಪತಿ ಸೇವಾ ಸಮಿತಿಯಿಂದ ಆಚರಿಸಲ್ಪಡುವ ಗಣೇಶೋತ್ಸವ ಒಂದೇ, ಎರಡೇ ಪ್ರತಿಯೊಂದರಲ್ಲೂ ಇಲ್ಲಿಯ ಜನರ ಭಾಗವಹಿಸುವಿಕೆ ಅದ್ಭುತ.

ಶಾಲೆ ಏನೋ ಇತ್ತು ಆದರೆ ಅವಶ್ಯಕ ಮೂಲಭೂತ ಸೌಕರ್ಯಗಳ ಕೊರತೆ ಈ ಶಾಲೆಯಲ್ಲಿತ್ತು. ಇದರ ಸುಧಾರಣೆಗೆ ಟೊಂಕ ಕಟ್ಟಿ ನಿಂತವರು ಈ ಶಾಲೆಯ ಶಿಕ್ಷಕವೃಂದ ಶಾಲಾ ಪರಿಸರದಲ್ಲಿ ಚಿಕ್ಕದಾದ ಒಂದು ಕೈತೋಟ, 40 ಕ್ಕೂ ಹೆಚ್ಚು ಹೂಕುಂಡಗಳಲ್ಲಿ ಹೂಗಳ ಗಿಡವನ್ನು, ಔಷಧಿಯ ಸಸ್ಯ ಬೆಳೆಸಿ ವಿದ್ಯಾರ್ಥಿಗಳಲ್ಲಿ ಹಸಿರೀಕರಣದ ಮಹತ್ವಕ್ಕೆ ಆದ್ಯತೆ ನೀಡುತ್ತಿದ್ದಾರೆ.

English Reading corner ಈ ಶಾಲೆಯ ವಿಶೇಷತೆ. ಇಂಗ್ಲೀಷ್ ಕಲಿಕಾ ಆದ್ಯತೆಗೆಅನುಗುಣವಾಗಿ ಅವಶ್ಯಕ ಕಲಿಕಾ ಸಾಮಾಗ್ರಿ ಜೋಡಿಸಿ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅನುವು ಮಾಡಿ ಕೊಟ್ಟಿದ್ದಾರೆ. ಪ್ರತೀ ಭೋಧನಾ ಕೊಠಡಿಯಲ್ಲೂ ತರಗತಿವಾರು ಅವಶ್ಯಕ ಕಲಿಕಾ ಸಾಮಾಗ್ರಿ ಜೋಡಿಸಿ ತರಗತಿಯನ್ನು ಅಲಂಕರಿಸಿದ್ದಾರೆ.

ನಮ್ಮೂರ ರಾಜಶೇಖರ್ ಅನ್ನುವ ದಾನಿಗಳ ನೆರವಿನ ಮೂಲಕ Round table chair ಮಾಡಿಸಿ ನಲಿ–ಕಲಿ ಕೊಠಡಿಯನ್ನು ಮೆರಗುಗೊಳಿಸಿದ್ದಾರೆ. ಈ ಶಾಲೆಯಲ್ಲಿ ನಲಿ–ಕಲಿ ತುಂಬಾ ಚೆನ್ನಾಗಿ ಅನುಷ್ಠಾನಗೊಂಡಿದ್ದು ಪ್ರಸ್ತುತ ಸಾಲಿನಲ್ಲಿ 34 ವಿದ್ಯಾರ್ಥಿಗಳು ನಲಕಲಿಯಲ್ಲಿದ್ದಾರೆ.

ಇನ್ಫೋಸಿಸ್ ಸಂಸ್ಥೆಯ ನೆರವಿನೊಂದಿಗೆ ಕಂಪ್ಯೂಟರ್ ಪಡೆದು ಸ್ಥಳೀಯ ದಾನಿಗಳಾದ ಶ್ರೀಯುತ ನಗರ ನಾಗರಾಜ ಶೆಟ್ಟಿಯವರ ಮೂಲಕ ಪ್ರಿಂಟರ್ ಹಾಗೂ ಯು.ಪಿ.ಎಸ್ ಸೌಲಭ್ಯವನ್ನು ಪಡೆದು ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣದ ಜ್ಞಾನವನ್ನು ಸಹ ನೀಡುತ್ತಿದ್ದಾರೆ.

ಈ ಶಾಲೆ ಇಂದು ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎಂದರೆ ಅದಕ್ಕೆ ಮುಖ್ಯ ಕಾರಣ ಸಹೃದಯಿ ದಾನಿಗಳು. ತರಗತಿ ಕೋಣೆಗಳಿಗೆ ಡೆಸ್ಕ್, ಬೆಂಚು, ಟೇಬಲ್‌ಗಳು, ಕುರ್ಚಿಗಳು ಪ್ರತಿಯೊಂದೂ ಸಹ ಒಬ್ಬೊಬ್ಬ

ದಾನಿಗಳಿಂದ ಕೊಡಲ್ಪಟ್ಟ ವಸ್ತುಗಳಾಗಿವೆ. ವಿದ್ಯಾರ್ಥಿಗಳ ಕ್ರೀಡಾ ಪ್ರೋತ್ಸಾಹಕ್ಕಾಗಿ ದಾನಿಗಳಿಂದ 25 ಜೊತೆ ಕ್ರೀಡಾ ಸಮವಸ್ತ್ರಗಳನ್ನೂ ಹಾಗೂ ಆಟೋಪಕರಣಗಳನ್ನು ಸಹ ಪಡೆಯಲಾಗಿದೆ.

ಶಾಲೆಯ ಒಳಗಡೆ ಶೃಂಗಾರದ ಜೊತೆಗೆ ಹೊರಗಿನ ಗೋಡೆಯ ಮೇಲೆ ಶಿಕ್ಷಕರು ಮತ್ತು ಮಕ್ಕಳು 'ತೋಚಿದ್ದು ಗೀಚು" ಅನ್ನುವ ಕಲ್ಪನೆಯಲ್ಲಿ ಒಂದಿಷ್ಟು ಚಿತ್ತಾರಗಳನ್ನು ಬಿಡಿಸಿ ಅಂದಗೊಳಿಸಿದ್ದಾರೆ.

**ಶೈಕ್ಷಣಿಕ ಅಂಶಗಳು** :–

- ದಾಖಲಾತಿ ಆಂದೋಲನ BOND ವಿತರಣೆ:–
  ಈ ಶಾಲೆಯಲ್ಲಿ ಪ್ರತೀ ವರ್ಷ ವಿದ್ಯಾರ್ಥಿಗಳ ಮನೆ ಮನೆಗೂ ತೆರಳಿ ಶಾಲೆಗೆ ದಾಖಲಿಸುವಂತೆ ಪ್ರೇರೇಪಿಸುತ್ತಿದ್ದಾರೆ. ಜೊತೆಗೆ 1ನೇ ತರಗತಿಗೆ ಸೇರಿದ ವಿದ್ಯಾರ್ಥಿಗಳಿಗೆ 1000 ರೂ. ನ 10 ವರ್ಷದ ಬಾಂಡ್‌ನ್ನು ಈ ಶಾಲಾ ಶಿಕ್ಷಕಿ ರೇಖಾಪ್ರಭಾಕರ್ ನೀಡುತ್ತಿದ್ದಾರೆ. ಇದುವರೆಗೆ 35 ವಿದ್ಯಾರ್ಥಿಗಳು ಈ ಸೌಲಭ್ಯ ಪಡೆದಿದ್ದು ಪ್ರಸ್ತುತ ಸಾಲಿನಲ್ಲಿ 15 ವಿದ್ಯಾರ್ಥಿಗಳು ಈ ಯೋಜನೆಗೆ ಒಳಪಡುತ್ತಿದ್ದಾರೆ. ಸ್ಥಳೀಯ ಖಾಸಗಿ ಶಾಲೆಯಿಂದಲೂ ಸಹ ವಿದ್ಯಾರ್ಥಿಗಳು ಬಂದು ದಾಖಲಾಗುತ್ತಿರುವುದು ವಿಶೇಷ.
- ಇಲಾಖೆಯಿಂದ ಕಾಲಕಾಲಕ್ಕೆ ಒದಗಿಸುವ ತರಬೇತಿಯನ್ನು ಪಡೆದು ತರಗತಿ ಕೋಣೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತೀ ಪಾಠದಲ್ಲೂ ತರಗತಿಯಲ್ಲೂ ಭೋಧನೋಪಕರಣ ಬಳಕೆ ಮಾಡಿ ವಿದ್ಯಾರ್ಥಿಗಳ ಕಲಿಕಾ ಚಟುವಟಿಕೆಯಲ್ಲಿ CCE ಅನ್ವಯಿಸಲಾಗುತ್ತಿದೆ.
  ವಿಜ್ಞಾನ ಪ್ರಯೋಗಗಳನ್ನು ಹತ್ತು ಅಂಶಗಳ ಕಾರ್ಯ ಕ್ರಮದಡಿಯಲ್ಲಿ 'ಮಾಡಿತಿಳಿ' ತತ್ವದಲ್ಲಿ ನಿರ್ವಹಿಸಲಾಗಿದ್ದು ವಿದ್ಯಾರ್ಥಿಗಳಲ್ಲಿ ವಿಜ್ಞಾನದಲ್ಲಿ ಆಸಕ್ತಿ ಬೆಳೆಸಲಾಗುತ್ತಿದೆ. ಜೊತೆಗೆ ಇಲ್ಲಿಯ ಶಿಕ್ಷಕರು ಸುಸಜ್ಜಿತವಾದ ಒಂದು ವಿಜ್ಞಾನ ಪ್ರಯೋಗಾಲಯದ ನಿರ್ಮಾಣದಕನಸು ಹೊತ್ತು ಆ ನಿಟ್ಟಿನಲ್ಲಿ ವಸ್ತುಗಳ ಜೋಡಣೆಯನ್ನು ಸಹ ಮಾಡುತ್ತದ್ದಾರೆ.

  ಬ್ಯಾಗ್ ರಹಿತ ದಿನಗಳಲ್ಲಿ ದೇಶೀ ಆಟಗಳಿಗೆ, ಮನರಂಜನಾ ಮೆದುಳಿಗೆ ಮೇವು ಚಟುವಟಿಕೆಗಳಿಗೆ ಆದ್ಯತೆ ನೀಡಲಾಗುತ್ತಿದೆ.ಕ್ರಾಪ್ಟ ಕೆಲಸಗಳು, ಮಾಡೆಲ್ ತಯಾರಿಕೆಯನ್ನು ಬ್ಯಾಗ್‌ಲೆಸ್ ದಿನದ ಚಟುವಟಿಕೆಯಲ್ಲಿ ಮಾಡಲಾಗುತ್ತಿದೆ.
  ಹಳೇ ವಿದ್ಯಾರ್ಥಿ ಸಂಘದ ನೆರವಿನೊಂದಿಗೆ ಪ್ರತೇ ವರ್ಷ ಶಾಲಾ ವಿದ್ಯಾರ್ಥಿಗಳಿಗೆ ದೈರಿ ವಿತರಣೆ ಮಾಡಲಾಗುತ್ತಿತ್ತು. ಗ್ರಂಥಾಲಯ ಬಳಕೆಯನ್ನು "ಪುಸ್ತಕ ಪರಿಚಯ" ಕಾರ್ಯಕ್ರಮ ಹಾಗೂ "ತೆಗೆ ಪುಸ್ತಕ ಹೊರಗೆ" ಕಾರ್ಯಕ್ರಮದಡಿಯಲ್ಲಿ ಮಾಡಲಾಗುತ್ತಿದ್ದು ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ಪುಸ್ತಕವನ್ನು ಸಹ ಸಂಗ್ರಹಿಸಲಾಗಿದೆ.

  ಸರ್ಕಾರ ಕೊಡುವ ಸಮವಸ್ತ್ರಗಳಲ್ಲದೆ ಸ್ಥಳೀಯ ದಾನಿಗಳಾದ ಶ್ರೀಯುತ ಶ್ರೀಧರ ಭಂಡಾರಿಯವರಿಂದ ಎಲ್ಲಾ ವಿದ್ಯಾರ್ಥಿಗಳಿಗೂ Track Suit ಕೊಡಿಸಲಾಗಿದೆ. ಇದೇ ದಾನಿಗಳಿಂದ 10 ಜೊತೆ ಕರಾಟೆ ಬಟ್ಟೆಯನ್ನು ಸಹ ಪಡೆಯಲಾಗಿದ್ದು ಶಾಲಾ ಕರಾಟೆ ವಿದ್ಯಾರ್ಥಿಗಳಿಗೆಸ್ಪರ್ಧೆಯಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಡಲಾಗಿದೆ. ವಿದ್ಯಾರ್ಥಿಗಳೋ.. ಈಗಾಗಲೇ ಜಿಲ್ಲಾ ಮಟ್ಟದ್ದಲ್ಲಿ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಗಳಿಸಿರುತ್ತಾರೆ.

ಪ್ರತೀ ವರ್ಷ ಹೊರಸಂಚಾರ, ಶಾಲಾ ಶೈಕ್ಷಣಿಕ ಪ್ರವಾಸ ಹಾಗೂ ಶಾಲಾ ವಾರ್ಷಿಕೋತ್ಸವ ಹಮ್ಮಿಕೊಳ್ಳಲಾಗುತ್ತುದ್ದು ಹಳವಿದ್ಯಾರ್ಥಿಗಳ, ಪೋಷಕರ ಹಾಗೂ ಊರಜನರ ಸಹಕಾರ ಪಡೆಯುತ್ತಿರುವುದು ಅನಿಕರಣೀಯ ಎಂದರೂ ತಪ್ಪಾಗಲಾರದು. ಪ್ರತಿಭಾ ಕಾರಂಜಿ ಹಾಗೂ ಕ್ರೀಡೆಯಲ್ಲಿ ಇಲ್ಲಿಯ ಮಕ್ಕಳು ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ರಾಜ್ಯಮಟ್ಟದಲ್ಲಿ 2 ಬಾರಿ ಭಾಗವಹಿಸಿ ಪ್ರಶಸ್ತಿ ಗಳಿಸಿರುವುದು ವಿದ್ಯಾರ್ಥಿಗಳ ಸಾಧನೆಗೆ ಹಿಡಿದ ಕೈಗನ್ನಡಿ.

ಕಳೆದ ಶೈಕ್ಷಣಿಕ ವರ್ಷದಲ್ಲಿ ಶೀಯುತ ಶ್ರೀಧರ ಬಿದನೂರು ಅವರು ಎರಡು ವರ್ಷಕ್ಕೆ ಆಗುವಷ್ಟು ನೋಟ್‌ಬುಕ್ ವಿತರಿಸಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಶಾಲಾ S.D.M.C ಶ್ರೀ ಎ. ಎನ್ ಆದಿರಾಜ್ ಅವರು ನೋಟ್‌ಬುಕ್ ವಿತರಿಸಿರುತ್ತಾರೆ.

**ಕನಸು :-**

"ಕನಸು ಕಾಣಲು ಸಾಧ್ಯವೆಂದಾದರೆ ಅದನ್ನು ನನಸು ಮಾಡಲು ನಿನ್ನಿಂದ ಸಾಧ್ಯ" ಎಂಬ ಮಾತಿನಂತೆ ನಮ್ಮ ಶಾಲೆಗೆ ಸುಸಜ್ಜಿತವಾದ ಒಂದು ದೊಡ್ಡ ನಲಿಕಲಿ ಕೊಠಡಿಯ ಅವಶ್ಯಕವಗಿದ್ದು ಆ ಕೆಲಸವೂ ಸಹ ಆರಂಭಿಕ ಹಂತದಲ್ಲಿರುವುದು ನಮಗೆ ಸಂತೋಷದ ವಿಷಯ.

ವಿಜ್ಞಾನ ಪ್ರಯೋಗಾಲಯವನ್ನು ಇನ್ನಷ್ಟು ಸಮೃದ್ಧಗೊಳಿಸುವುದು ಈ ಶಾಲಾ ಶಿಕ್ಷಕರ ಇರಾದೆಯಾಗಿದೆ.

ಒಂದು ಸುಂದರವಾದ ವಾತಾವರಣದಲ್ಲಿ ಸುಸಜ್ಜಿತವಾದ ಎಲ್ಲಾ ಸೌಕರ್ಯಗಳೊಂದಿಗೆ ಕಂಗೊಳಿಸುವಂತಹ ಶಾಲಾ ನಿರ್ಮಾಣ ಹಾಗೂ ಸಚ್ಚಾರಿತ್ರ್ಯವುಳ್ಳ ಮಕ್ಕಳ ಬೆಳವಣಿಗೆಯ ಕನಸು ಹೊಂದಿದ್ದಾರೆ ಇಲ್ಲಿಯ ಶಿಕ್ಷಕರು ಇವರಿಗೆ ಬೆನ್ನೆಲುಬಾಗಿ ಶಾಲಾ ಎಸ್.ಡಿ.ಎಂ.ಸಿ ಹಾಗೂ ಹಳೆವಿದ್ಯಾರ್ಥಿ ಸಂಘ ಜೊತೆಗಿರುವುದು ಹೆಮ್ಮೆಯ ವಿಷಯ.






# ಶಾಲೆಯಲ್ಲಿ ಕೈಗೊಂಡ ನಾವೀನ್ಯಯುತ ಚಟುವಟಿಕೆಗಳು












# ಶಾಲೆಯಲ್ಲಿ ಕೈಗೊಂಡ ನಾವೀನ್ಯಯುತ ಚಟುವಟಿಕೆಗಳು
















